ರೇಷ್ಮೆ ಮಾರುಕಟ್ಟೆಗಳು

2250 (1443); ಶ್ರೀ ಬಾದರ್ಲಿ ಹಂಪನಗೌಡ

ಅ) ರಾಜ್ಯದಲ್ಲಿರುವ ರೇಷ್ಮೆ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಆಧುನೀಕರಣಗೊಂಡ ರೇಷ್ಮೆ ಮಾರುಕಟ್ಟೆಗಳು ಎಷ್ಟು; ರೇಷ್ಮೆ ಮಾರುಕಟ್ಟೆಗಳ ನವೀಕರಣಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ನೀಡಿರುವ ಅನುದಾನವೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ರೇಷ್ಮೆ ಮಾರುಕಟ್ಟೆಗಳಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯ ಎಷ್ಟು; ರೇಷ್ಮೆ ಮಾರುಕಟ್ಟೆಗಳಲ್ಲಿ ನಡೆಯುವ ತಿಂಗಳ ವಹಿವಾಟು ಎಷ್ಟು;

ಇ) ರೇಷ್ಮೆ ಬೆಳೆಯುವ ರೈತರಿಗೆ ಸರ್ಕಾರ ನೀಡುವ ಪ್ರೋತ್ಸಾಹ ಹಾಗೂ ರೇಷ್ಮೆ ಬೆಳೆಯನ್ನು ಉತ್ತೇಜಿಸಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು);

ಈ) ರೇಷ್ಮೆ ಮಾರುಕಟ್ಟೆಗಳಿಗೆ ಗೂಡನ್ನು ತರುವ ರೈತರನ್ನು ದಲ್ಲಾಳಿಗಳು ವಂಚಿಸಿ, ಕಡಿಮೆ ಬೆಲೆಗೆ ರೇಷ್ಮೆ ಗೂಡನ್ನು ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ರೈತರನ್ನು ವಂಚಿಸುವ ಎಷ್ಟು ಮಂದಿ ದಲ್ಲಾಳಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; ದಲ್ಲಾಳಿಗಳನ್ನು ರೇಷ್ಮೆ ಮಾರುಕಟ್ಟೆಯಿಂದ ದೂರವಿಡುವ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ 54 ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಿರುತ್ತವೆ.

1. ರೇಷ್ಮೆ ಗೂಡಿನ ವಹಿವಾಟಿನಲ್ಲಿ ಪಾರದರ್ಶಕತೆ ತರಲು 5 ಮಾರುಕಟ್ಟೆಗಳಲ್ಲಿ ಸಿ.ಸಿ.ಟಿ.ವಿ ಅಳವಡಿಸಲಾಗಿದೆ.

2. ಬಿತ್ತನೆ ವಲಯದ 15 ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಹಿವಾಟನ್ನು ಗಣಕೀಕರಣಗೊಳಿಸಲಾಗಿದೆ.
3. ವಿದ್ಯುತ್ ಅಭಾವ ನೀಗಿಸಲು ರೇಷ್ಮೆ ಗೂಡಿನ ಮಾರುಕಟ್ಟೆ ಶಿಡ್ಲಘಟ್ಟ ಮತ್ತು ರಾಮನಗರದಲ್ಲಿ ತಲಾ 20 KW ಸೋಲಾರ್ ಪವರ್ ಸಿಸ್ಟಂನ್ನು ಅಳವಡಿಸಲಾಗಿದೆ.
4. ರೇಷ್ಮೆ ಗೂಡಿನ ಮಾರುಕಟ್ಟೆ ಕೊಳ್ಳೇಗಾಲದಲ್ಲಿ ಹಾಗೂ ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯ ದ್ವಿತಳಿ ವಿಭಾಗದಲ್ಲಿ ಇ–ಹರಾಜು ಪದ್ಧತಿ ಅನುಷ್ಠಾನಗೊಳಿಸಲಾಗಿದೆ.
5. ಶಿಡ್ಲಘಟ್ಟ, ಕೋಲಾರ, ವಿಜಯಪುರ ಮಾರುಕಟ್ಟೆಗಳಲ್ಲಿ ಇ–ಹರಾಜು ಪ್ರಾರಂಭಿಸಲು ಪೂರ್ವಸಿದ್ಧತಾ ಕ್ರಮಗಳನ್ನು ಆರಂಭಿಸಿದೆ.

ಕಳೆದ 3 ವರ್ಷಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳ ನವೀಕರಣ/ನಿರ್ವಹಣೆಗಾಗಿ ಭರಿಸಲಾದ ವೆಚ್ಚದ ಜಿಲ್ಲಾವಾರು, ಮಾರುಕಟ್ಟೆವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಆ) 2014–15 ನೇ ಸಾಲಿನಲ್ಲಿ ರೇಷ್ಮೆ ಮಾರುಕಟ್ಟೆಗಳಿಂದ ₹ 3437.98 ಲಕ್ಷಗಳು ಮಾರುಕಟ್ಟೆ ಶುಲ್ಕವಾಗಿ ಸರ್ಕಾರಕ್ಕೆ ಜಮಾ ಆಗಿದೆ.

ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಪ್ರತಿ ತಿಂಗಳು ಅಂದಾಜು 4000 ರಿಂದ 4500 ಮೆ. ಟನ್ ಗೂಡಿನ ವಹಿವಾಟು ನಡೆಯುತ್ತಿದೆ.

ಇ) ರೇಷ್ಮೆ ಉದ್ಯಮದ ಭಾಗೀದಾರರಿಗೆ ರೇಷ್ಮೆ ಕೃಷಿ ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕ್ರಮಗಳ ವಿವರ ಕೆಳಕಂಡಂತಿದೆ:

1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು ಪ್ರೋತ್ಸಾಹ ಹಾಗೂ ತಾಂತ್ರಿಕ ಮಾಹಿತಿ.
2. ರೇಷ್ಮೆ ಹುಳು ಸಾಕಾಣಿಕೆಗೆ ಸುಳು ಸಾಕುವ ಮನೆಗೆ ಸಹಾಯಧನ, ಸೋಂಕು ನಿವಾರಕಗಳು, ಸಲಕರಣೆಗಳ ಪೂರೈಕೆ, ಇತ್ಯಾದಿ ಹಾಗೂ ತಾಂತ್ರಿಕ ಮಾಹಿತಿ.

3. ಬಿತ್ತನೆ ಬೆಳೆಗಾರರಿಗೆ ಪ್ರೋತ್ಸಾಹ ಹಾಗೂ ಸಹಾಯಧನ.
4. ಹನಿ ನೀರಾವರಿ ಅಳವಡಿಕೆಗೆ ಶೇ. 90 ರಷ್ಟು ಸಹಾಯಧನ.
5. ಉತ್ಪಾದನೆ ಮತ್ತು ಉತ್ಪಾದಕತೆ ಆಧರಿಸಿ ಗೂಡಿಗೆ ಪ್ರೋತ್ಸಾಹಧನ.
6. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಟ್ರೆಂಚಿಂಗ್–ಮಲ್ಚಿಂಗ್ ಮತ್ತು ಜೈವಿಕ ಗೊಬ್ಬರಕ್ಕೆ ಸಹಾಯಧನ.
7. ನೂತನ ತಾಂತ್ರಿಕತೆಗಳ ಅಳವಡಿಕೆಗೆ ತರಬೇತಿ ಮತ್ತು ಕಾರ್ಯಾಗಾರ.
8. ರೇಷ್ಮೆ ಕೃಷಿಕರಿಗೆ ತರಬೇತಿ ಹಾಗೂ ಅಧ್ಯಯನ ಪ್ರವಾಸ.
9. ರೇಷ್ಮೆ ಕೃಷಿಕರಿಗೆ ನೀಡಲಾಗುತ್ತಿರುವ ಸಹಾಯಧನ/ಪ್ರೋತ್ಸಾಹಧನದ ಸಮರ್ಪಕ, ಸುಗಮ ಹಾಗೂ ತ್ವರಿತ ವಿತರಣೆಗೆ ಇಲಾಖೆಯು ಸಮಗ್ರ ಗಣಕೀಕರಣ ಕಾರ್ಯಕ್ರಮ ಅನುಷ್ಠಾನಗೊಳಿಸಲು ಯೋಜಿಸಿದೆ.
10. ರೇಷ್ಮೆ ಗೂಡಿನ ವಹಿವಾಟಿಗೆ ರೇಷ್ಮೆ ಗೂಡಿನ ಮಾರುಕಟ್ಟೆ ವ್ಯವಸ್ಥೆ ಸುಧಾರಣೆ ಹಾಗೂ ಹಂತ–ಹಂತವಾಗಿ ಇ–ಹರಾಜು ಅನುಷ್ಠಾನ.
11. ರೇಷ್ಮೆ ಆಮದು ಶುಲ್ಕ ಹೆಚ್ಚಿಸಲು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.
12. ರೀಲಿಂಗ್ ಕುರಿತಾಗಿ ವಿವಿಧ ರೀತಿಯ ಪ್ರೋತ್ಸಾಹ ಹಾಗೂ ತಾಂತ್ರಿಕ ತರಬೇತಿ.

ಈ ಮೇಲ್ಕಂಡ ಕಾರ್ಯಕ್ರಮಗಳಲ್ಲಿ ರೇಷ್ಮೆ ಉದ್ಯಮದ ಭಾಗೀದಾರರಿಗೆ 2014–15 ನೇ ಸಾಲಿನಲ್ಲಿ ನೀಡಲಾದ ಸಹಾಯಧನ / ಪ್ರೋತ್ಸಾಹಧನ ಜಿಲ್ಲಾವಾರು ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.

ಈ) ರೇಷ್ಮೆ ಗೂಡಿನ ಹರಾಜಿನಲ್ಲಿ ದಲ್ಲಾಳಿಗಳು ರೈತರನ್ನು ವಂಚಿಸಿ ಹೆಚ್ಚಿನ ಬೆಲೆಗೆ ಗೂಡು ತೆಗೆದುಕೊಳ್ಳುವವ ಪ್ರಕರಣಗಳು ಇರುವುದಿಲ್ಲ.

ರೇಷ್ಮೆ ಗೂಡಿನ ಮಾರುಕಟ್ಟೆ ವಹಿವಾಟಿನಲ್ಲಿ ಪಾರದರ್ಶಕತೆ ತರಲು ಇ–ಹರಾಜು ಪ್ರಕ್ರಿಯೆ ಆರಂಭಿಸಲಾಗಿದೆ. ಕೊಳ್ಳೇಗಾಲ ಹಾಗೂ ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ–ಹರಾಜು ಪದ್ಧತಿ ಅನುಷ್ಠಾನಗೊಳಿಸಲಾಗಿದೆ. ಹಂತ–ಹಂತವಾಗಿ ಉಳಿದ ಮಾರುಕಟ್ಟೆಗಳಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ. ಈಗಾಗಲೇ ಕೋಲಾರ. ವಿಜಯಪುರ ಮತ್ತು ಶಿಡ್ಲಘಟ್ಟ ಮಾರುಕಟ್ಟೆಗಳಲ್ಲಿ ಇ–ಹರಾಜು ಅನುಷ್ಠಾನಗೊಳಿಸಲು ಪೂರ್ವ ಸಿದ್ದತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಊ) ಕೇವಲ ಪರವಾನಿಗೆ ಹೊಂದಿರುವ ರೀಲರುಗಳು ಮಾತ್ರ ಗೂಡು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿದೆ. ಅದರಂತೆ ದಲ್ಲಾಳಿಗಳು ಹರಾಜಿನಲ್ಲಿ ಭಾಗಹಿಸುವ ಸಂದರ್ಭ ಇರುವುದಿಲ್ಲ.

ತ್ತರ ಸಂಖ್ಯೆ 1443ಕ್ಕೆ ಅನುಬಂಧ-1

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳ ಕಳೆದ 3 ವರ್ಷಗಳಲ್ಲಿ ನವೀಕರಣ / ನಿರ್ವಹಣೆಗಾಗಿ ಭರಿಸಲಾದ ವೆಚ್ಚದ ವಿವರ (ರೂ ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆ	ಮಾರುಕಟ್ಟೆ	2012-13	2013-14	2014-15
1	ಬೆಂಗಳೂರು ನಗರ	ಬೆಂಗಳೂರು	0.580	2.010	2 010
		ಅತ್ತಿಬೆಲೆ	1 650	1 320	1 320
		ಸರ್ಜಾಪುರ	0.180	0.150	0.150
2	ರಾಮನಗರ	ರಾಮನಗರ	60 220	107.090	62.500
		ಚನ್ನಪಟ್ಟಣ	3.220	26.060	38 400
		ಕನಕಪುರ	8.470	72.360	68.720
		ಮಾಗಡಿ	0.400	0.200	0.200
		ಕುದೂರು	0 400	0.130	0 130
		ವಿ.ಜಿ.ದೊಡ್ಡಿ	-	-	27.500
		ಸೋಲೂರು	0.400	0.920	0.920
3	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	26 150	45.480	138.850
		ಚಿಂತಾಮಣಿ	35 710	10 670	48.930
		ಚಿಕ್ಕಬಳ್ಳಾಪುರ	5 370	2.730	2 730
		ಹೆಚ್.ಕ್ರಾಸ್	15.140	4 040	4 040
4	ಚಾಮರಾಜನಗರ	ಕೊಳ್ಳೇಗಾಲ	18 830	43.160	64.100
		ಸಂತೇಮರಹಳ್ಳಿ	6.980	3.500	58.250
5	ಬೆಂಗಳೂರು ಗ್ರಾಮಾಂತರ	ವಿಜಯಪುರ	12.580	47.160	78 830
6	ಕೋಲಾರ	ಕೋಲಾರ	20.340	40.770	53.300
		ಕ್ಯಾಲನೂರು	3 510	6.050	27 990
		ಶ್ರೀನಿವಾಸಪುರ	5 660	3 440	27 930
7	ಮಂಡ್ಯ	ಮಳವಳ್ಳಿ	1 080	13.910	32 130
		ಕೆ.ಆರ್.ಪೇಟೆ	0 120	0 330	0 330

8	ತುಮಕೂರು	ತುಮಕೂರು	0 620	0.890	0.890
		ಕುಣಿಗಲ್	1.330	5.550	13.380
		ಹೆಬ್ಬೂರು	0.310	0.340	8.550
		ಹುಲಿಯೂರುದುರ್ಗ	0.750	6 100	9.120
		ಸಂತೇಮಾವತ್ತೂರು	1.030	0.510	7.510
		ಕೆಂಪನಹಳ್ಳಿ	-	4.000	-
		ಚೌಡನಕುಪ್ಪೆ	0.900	0.130	8.400
9	ಬಾಗಲಕೋಟೆ	ಮುಧೋಳ	0.270	0.150	0.150
		ಇಳಕಲ್	-		
10	ಗದಗ	ಶಿರಹಟ್ಟಿ	3.430	0.690	0.690
11	ಧಾರವಾಡ	ರಾಯಾಪುರ	-	0.820	0.820
12	ಗುಲ್ಬರ್ಗ	ಗುಲ್ಬರ್ಗಾ	20.860	7.290	1.300
13	ಬೆಳಗಾವಿ	ಬೆಳಗಾವಿ	0.170	15.250	0.280
		ಅಥಣಿ	-		
		ಗೋಕಾಕ್	0.910		
14	ಬೀದರ್	ಹುಮ್ನಾಬಾದ	2.000		
15	ಬಿಜಾಪುರ	ಬಿಜಾಪುರ	0.150		
16	ಹಾಸನ	ಹಾಸನ	0.100	1 080	7.250
17	ರಾಮನಗರ	ರಾಮನಗರ	0 200	0 840	0.840
18	ರಾಯಚೂರು	ಲಿಂಗಸೂಗೂರು		4 600	
		ಒಟ್ಟು	260.020	479.720	798.440

ಪ್ರಶ್ನೆ ಸಂಖ್ಯೆ 1443ಕ್ಕೆ ಅನುಬಂಧ -2

2014-15ನೇ ಸಾಲಿನಲ್ಲಿ ರೇಷ್ಮೆ ಉದ್ಯಮದ ಭಾಗೀದಾರರಿಗೆ ನೀಡಲಾದ ಸಹಾಯಧನ / ಪ್ರೋತ್ಸಾಹಧನ ಜಿಲ್ಲಾವಾರು ವಿವರಗಳು (ರೂ.ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಗಳು	ಬಿಡುಗಡೆ	ವೆಚ್ಚ
1	ಬಾಗಲಕೋಟೆ	274.205	273.241
2	ಬೆಂಗಳೂರು ಗ್ರಾಮಾಂತರ	623.302	613.697
3	ಬೆಂಗಳೂರು ನಗರ	245.686	233.236
4	ಬೆಳಗಾವಿ	403.789	402.754
5	ಬಳ್ಳಾರಿ	298.332	297.780
6	ಬೀದರ್	166.315	157.457
7	ವಿಜಯಪುರ	100.174	98.968
8	ಚಾಮರಾಜನಗರ	652.089	585.464
9	ಚಿಕ್ಕಬಳ್ಳಾಪುರ	1488.291	1477.545
10	ಚಿಕ್ಕಮಗಳೂರು	31.455	27.970
11	ಚಿತ್ರದುರ್ಗ	538.725	536.696
12	ದಕ್ಷಿಣ ಕನ್ನಡ	0.525	0.525
13	ದಾವಣಗೆರೆ	123.683	119.844
14	ಧಾರವಾಡ	139.147	134.817
15	ಗದಗ	177.374	176.771

16	ಕಲ್ಬುರ್ಗಿ	241.996	238.752
17	ಹಾಸನ	420.129	415.748
18	ಹಾವೇರಿ	318.967	318.656
19	ಕೊಡಗು	3.345	2.585
20	ಕೋಲಾರ	1632.462	1625.222
21	ಕೊಪ್ಪಳ	133.699	133.407
22	ಮಂಡ್ಯ	707.869	675.869
23	ಮೈಸೂರು	367.401	363.366
24	ರಾಯಚೂರು	212.566	211.441
25	ರಾಮನಗರ	1779.081	1737.063
26	ಶಿವಮೊಗ್ಗ	58.383	56.368
27	ತುಮಕೂರು	1315.637	1277.472
28	ಉಡುಪಿ	2.975	2.975
29	ಉತ್ತರ ಕನ್ನಡ	62.702	62.388
30	ಯಾದಗಿರಿ	85.541	83.369
31	ಇತರೆ	1936.000	1936.059
	ಒಟ್ಟು	14540.195	14278.102